ವಾಂತಿ ಮಾಡಿದ ಕುರೂಪಿಯ ಹಾಗೆ... ಥೇಟ್... ಹಾಗೇ. ಧ್ವನಿಯೊಂದು ಮಾಸಿಲ್ಲ... ಎಲ್ಲ ಶುಷ್ಕ ಮಾತುಗಳು ಮುಗಿದವು. ಆಕೆ ಮಿಸುಕಲಿಲ್ಲ. ನೀರು, ಚಹಾ ಎಂದು ಏಳಲಿಲ್ಲ. ತನ್ನ ಜೀವನದಲ್ಲಿ ಎಲ್ಲರೂ ಮೋಸ ಮಾಡಿದರು ಎಂದಳು. ತನ್ನ ಅತ್ತಿಗೆ ತನಗೆ ವಿಷವಿಡಲು ಬಂದಳು ಎಂದಳು. ಸ್ವಂತ ಅಕ್ಕನ ಜರಿದಳು. ಮದುವೆಗೆ ಎಲ್ಲರೂ ಇನ್ನಾದರೂ ಒತ್ತಾಯಿಸುತ್ತಿರುವ ಬಗ್ಗೆ ಹೇಳಿದಳು. ನಿರಂತರ, ನಿಲ್ಲದಂತೆ ಮಾತನಾಡಿದಳು. ನೈಟಿಯೊಳಗೊಂದು ಕೋಲು, ಅದು ಓಡಾಡುವಂತೆ ಅವಳ ಚಲನೆಯಿತ್ತು.

'ನಾಜೀಮಾ...'

ಆರ್ತನಾದ ಒಳಗೆ ಮೊರೆಯಿತು.

'ನನಗೆ ಎಲ್ಲ ಓಕೆ ರವಿ, ಆದ್ರೆ ಅದೊಂದು ಆಗಲ್ಲ. ಎಷ್ಟು ಟ್ರೈ ಮಾಡಿದ್ರು ಅದು ಆಗಲ್ಲ. ನನ್ನ ಅಕ್ಕ ಕಳೆದ ವರ್ಷ ಹೆಂಡ್ತಿ ಸತ್ತಿರೋ ಒಬ್ಬರನ್ನು ಕರ್ಕೊಂಡು ಬಂದಿದ್ಲು. ನಿನ್ನ ಯಾರೂ ಆಗಲ್ಲ. ಇವ್ರು ಇಷ್ಟ ಪಟ್ಟಿದ್ದಾರೆ. ಆಸ್ತಿ ಚೆನ್ನಾಗಿದೆ, ಆಗು. ಅಂದ್ಲು. ನಾನು ಒಂದು ಕಂಡೀಷನ್ ಹಾಕಿದೆ. ಎಲ್ಲ ಅಂದ್ರೆ ಎಲ್ಲ ಆಗಲಿ, ಆದ್ರೆ ನನ್ನ ಮುಟ್ಬೋಕೆ ಬಿಡಲ್ಲ ಅಂತಾ. ಎಲ್ಲ ತೆಪ್ಪಗಾದ್ರು. ಹ್ಹಿ ಹ್ಹಿ. ಹೆಂಗೆ ರವಿ?'

'ಯಾಕೆ ಆಗಲ್ಲ?'

ಹಂಚಿಕೋ ನಾಜೀಮಾ... ಒಳಗಿನದೆಲ್ಲ ಹೊರಗೆ ಬರಲಿ. ಆ ನಿನ್ನ ಅದ್ಭುತ ಸಮಯದ ರಸಮಯ ದಿನಗಳ ಬಗ್ಗೆ ಹೇಳಿಕೋ... ಅಂದುಕೊಂಡ ಒಳಗೇ.

'ನಂಗೆ ಕಾಲೇಜಿನಲ್ಲಿ ಮೋಸ ಮಾಡ್ಬಿಟ್ರು ರವಿ... ಒಬ್ಬಳ್ನೇ ಕರೆಸಿ ಒಂದಿಬ್ರು ಅತ್ಯಾಚಾರ ಮಾಡ್ಬಿಟ್ರು...' ಕಿವಿಗಳು ಬಿಸಿಯಾದವು. ಗಂಟಲು ಒಣಗಿತು. ಗಾಳಿಗೆ ಕಿಟಕಿಯ ಕರ್ಟನ್ ಹಾರಿತು. ನಾನು ಒಳಗೆ ಬಂದ ಕಡೆಗೇ ನೋಡುತ್ತ ಆ ಇಬ್ಬರು ಹೆಂಗಸರು ನಗುತ್ತಾ ನಿಂತಿದ್ದರು.

'ಅವತ್ತಿಂದ ನನಗೆ ಅದು ಅಂದ್ರೆ ಆಗಲ್ಲ... ಏನ್ ಜೀವನ ರವೀ... ಅಪ್ಪ ಆಗ್ಲೇ ಹೋಗಿದ್ರು. ಅಮ್ಮ ಕಳೆದ ವರ್ಷ ಹೋದ್ಲು. ಇನ್ನು ನಾನು ಹೋಗೋದಷ್ಟೆ...'

ನನ್ನ ಬದುಕು ಇನ್ನೊಂಥರ ಕೊಳೆತು ಹೋಗಿದೆ ನಾಜೀಮಾ. ನೀನಾದ್ರೂ ಚೆನ್ನಾಗಿದ್ದೀಯ. ನಿನ್ನ ನೋಡಿ ಮನಸ್ಸು ತುಂಬಿಕೊಂಡು ಹೋಗೋಣಾಂತ ಬಂದೆ. ನೀನು ನೋಡಿದ್ರೆ... ಅಂದುಕೊಂಡ ಒಳಗೇ. ಒಮ್ಮೆ ಆಕಳಿಸಿ, ಮೈಮುರಿದು, ವಿಚಿತ್ರವಾದ ವರ್ತನೆ ಮಾಡಿದಳು ನಾಜೀಮಾ. ಸತ್ತ ನನ್ನ ಹೆಂಡತಿ ಇವಳ ಹತ್ತರಷ್ಟು ಸುಂದರವಾಗಿದ್ದಳು ಅನ್ನಿಸಿತು ಒಮ್ಮೆ. ಕೆಮ್ಮಿ, ಮಿಸುಕಾಡಿ ಕೂತು ಹೊರಡುವಂತೆ ನಟಿಸಿದ.

'ರವೀ... ನೀನೊಬ್ಬ ನನ್ನ ನಿಜವಾದ ಫ್ರೆಂಡು. ನಾನು ನಿನಗೊಬ್ಬನಿಗೇ ಹೇಳ್ತೀನಿ. ಇನ್ನೇನು ಇವತ್ತು ನಾಳೆ ನಾನು ನೇಣು ಹಾಕ್ಕೊಂತೀನಿ. ನನಗೆ ಯಾರ್‍ಯಾರು ಅನ್ಯಾಯ ಮಾಡಿದ್ದಾರೋ ಅವ್ರೆಲ್ಲರ ಹೆಸ್ರು ಬರೆದ ಲೆಟ್ರು ನಿನಗೆ ಕಳಿಸ್ತೀನಿ. ನಿನ್ನ ವಿಳಾಸ ಕೊಡು...'

ಒಂದು ಕಾಣೆಯಾದ ಜೀವ, ಒಂದು ಅನ್ಯಾಯದ ಸಾವು, ಒಂದು ಕೊರಗಿನ ಸಾವು, ಈಗೊಂದು ಆತ್ಮಹತ್ಯೆ... ಎಷ್ಟಕ್ಕೆ ಸಾಕ್ಷಿಯಾಗಬೇಕು ನಾನು...

'ಸರ್ ನಿನ್ನೆ ಮೊಬೈಲ್ ಕೊಟ್ಟಿದ್ರಲ್ಲ... ನಾನು ಇವತ್ತು ಬರಲಾ?' ನಾಜೀಮಾಳ ನೆನಪಿಸಿದ ಆ ಸುಂದರ ಹುಡುಗಿಯ ಕರೆ. 'ಬನ್ನಿ ಬನ್ನಿ' ಕರೆ ತುಂಡರಿಸಿದ.

ನಿಜವಾದ ನಾಜೀಮಾ ಎದುರಿಗೆ ನಿಂತುಬಿಟ್ಟಿದ್ದಳು, ಉದ್ದಕ್ಕೆ... ಮೋಹಿನಿಯಂತೆ... ನಿನ್ನ ವಿಳಾಸ ಕೊಡು... ಎನ್ನುತ್ತ.

'ಅಯ್ಯೋ, ಅರ್ಜೆಂಟು ಕೆಲಸ ಮರೆತು ಬಂದೆ. ಇನ್ನೊಮ್ಮೆ ಬಂದಾಗ ಸಿಗ್ತೀನಿ ನಾಜೀಮಾ ಅವರೆ.'

'ಅಲ್ರೀ... ನಿಮ್ ಅಡ್ರೆಸ್ ಕೊಡ್ರಿ... ನಿಮ್ ಮೊಬೈಲ್ ನಂಬರ್‍ರಾದ್ರೂ... ರವೀ...'